ಆ) ತೆರಿಗೆ ವಿಧಾನದಲ್ಲಿ ಪರಸ್ಪರ ತಾರತಮ್ಯ ನೀತಿ ಅನುಸರಿಸುತ್ತಿರುವುದು ನಿಜವೇ ?

ಇ) ತಾಲ್ಲೂಕು ಕೇಂದ್ರ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವಾಹನಗಳಿಗೆ ಫಿಲ್ಲಿಂಗ್ ಗ್ಯಾಸ್ ಬಂಕ್ ಸ್ಥಾಪನೆ ಬಗ್ಗೆ ಕಾರು ಚಾಲಕ ಮತ್ತು ಮಾಲೀಕರಿಂದ ಸರ್ಕಾರಕ್ಕೆ ಒತ್ತಾಯ ಬಂದಿದೆಯೇ ?

ಈ) ಬಂದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲು ಸರ್ಕಾರ ಇಚ್ಛಿಸಿದೆ ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬಂದಿರುವುದಿಲ್ಲ.

ಆ) ತೆರಿಗೆ ನಿಗದಿಪಡಿಸುವುದು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಈ ಕ್ರಮವನ್ನು ತಾರತಮ್ಯ ನೀತಿ ಎಂದು ಹೇಳಲಾಗದು.

ಇ) ಬಂದಿದೆ.

ಈ) ಜಿಲ್ಲಾಧಿಕಾರಿಗಳಿಗೆ ಸಮೀಕ್ಷೆ ನಡೆಸಿ ವರದಿ ನೀಡುವಂತೆ ಪತ್ರ ಬರೆಯಲಾಗಿದೆ ಹಾಗೂ ವರದಿ ನಿರೀಕ್ಷಿಸಲಾಗಿದೆ. ಹೊನ್ನಾವರ ತಾಲ್ಲೂಕಿನಲ್ಲಿ ಎಲ್.ಪಿ.ಜಿ.ಯನ್ನು ವಾಹನಗಳಲ್ಲಿ ಇಂಧನವಾಗಿ ಉಪಯೋಗಿಸಲು ಬಹಳಷ್ಟು ಬೇಡಿಕೆ ಇರುವ ಕಾರಣ, ಸ್ಟೇಟ್ ಲೆವೆಲ್ ಕೋ-ಆರ್ಡಿನೇಟರ್, ಭಾರತೀಯ ತೈಲ ಕಂಪನಿಗಳು ಬೆಂಗಳೂರು ಇವರಿಗೆ ಪತ್ರ ಬರೆದು ಹೊನ್ನಾವರದಲ್ಲಿ ಎಲ್.ಪಿ.ಜಿ. ರೀ-ಫಿಲ್ಲಿಂಗ್ ಕೇಂದ್ರಗಳನ್ನು ತೆರೆಯಲು ಕ್ರಮವಹಿಸುವಂತೆ ಕೋರಲಾಗಿದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಪ್ರಮುಖ ಪಟ್ಟಣಗಳಲ್ಲಿ ಸಹ ಅಗತ್ಯತೆಗನುಗುಣವಾಗಿ ಎಲ್.ಪಿ.ಜಿ. ರೀ-ಫಿಲ್ಲಿಂಗ್ ಕೇಂದ್ರಗಳನ್ನು ತೆರೆಯುವಂತೆ ಸಹ ಕ್ರಮ ತೆಗೆದು ಕೊಳ್ಳಲು ಸ್ಟೇಟ್ ಲೆವೆಲ್ ಕೋ-ಆರ್ಡಿನೇಟರ್‌ರವರನ್ನು ಕೋರಲಾಗಿದೆ.

319(602) ಶ್ರೀ ರಾಜೇಂದ್ರನ್ ಎಸ್.(ಕೆ.ಜಿ.ಎಫ್.) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ.ಜಿ.ಎಫ್. ಪಟ್ಟಣದಲ್ಲಿ ಅನಧಿಕೃತವಾಗಿ ಮತ್ತು ಕಾನೂನು ಬಾಹಿರವಾಗಿ ಕಟ್ಟಡ ನಿರ್ಮಾಣಗಳನ್ನು ಪತ್ತೆ ಮಾಡಲಾಗಿದೆಯೇ ;

ಆ) ಹಾಗಿದ್ದಲ್ಲಿ, ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ವ್ಯಕ್ತಿಗಳು ಈ ರೀತಿಯ ಅಕ್ರಮ ನಿರ್ಮಾಣವನ್ನು ಮಾಡಿದ್ದಾರೆ; (ವಿವರಗಳನ್ನು ಒದಗಿಸುವುದು)

ಇ) ಇದನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

320(603) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ.ಜಿ.ಎಫ್. ನಗರಸಭೆ ವತಿಯಿಂದ, ಯಾವ ಯಾವ ಆಸ್ತಿಗಳನ್ನು ಯಾರು ಯಾರಿಗೆ ಗುತ್ತಿಗೆ ನೀಡಲಾಗಿದೆ (ಆಸ್ತಿ ಪಾಸ್ತಿಯ ಅಂಗಡಿ ಮತ್ತು ಜಮೀನಿನ ವಿವರಗಳನ್ನು ನೀಡುವುದು) :